**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.64/2013

ಸಾಕ್ಷಿಯನ್ನು ದಿಃ **06.9.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಪಾಟೀ ಸವಾಲುಃ** 7**ನೇ ಪ್ರತಿವಾದಿ ಪರಃಶ್ರೀ**. AKN **ವಕೀಲರಿಂದ**:

7ನೇ ಪ್ರತಿವಾದಿಯ ತಂದೆಯ ಹೆಸರು ಅಣ್ಣಯ್ಯಹೆಗಡೆ ಎಂದರೆ ಸರಿ. ಅವರ ತಾಯಿಯ ಹೆಸರು ಸಾವಿತ್ರಮ್ಮ. ಅಣ್ಣಯ್ಯಹೆಗಡೆ ಮತ್ತು ಸಾವಿತ್ರಮ್ಮರವರಿಗೆ 3 ಜನ ಹೆಣ್ಣು ಹಾಗೂ 4 ಜನ ಗಂಡು ಮಕ್ಕಳು ಎಂದರೆ ಸರಿ. 7ನೇ ಪ್ರತಿವಾದಿ ಅವರ ತಂದೆ ತಾಯಿಗೆ 2ನೇ ಮಗಳು ಎಂದರೆ ಸರಿ. 7ನೇ ಪ್ರತಿವಾದಿಯ ಅಕ್ಕನನ್ನು ಒಬ್ಬ ಎಸ್ಟೇಟ್ ಮಾಲೀಕರಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. 7ನೇ ಪ್ರತಿವಾದಿಯ ತಂಗಿ ಶಿಕಿಲಾ ರವರನ್ನು ಒಬ್ಬ ಕಾಫಿ ಪ್ಲಾಂಟರ್ ಆದ ಮಹೇಶ್ ರವರಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. 7ನೇ ಪ್ರತಿವಾದಿಯನ್ನು 1ನೇ ಪ್ರತಿವಾದಿಗೆ ಮದುವೆ ಮಾಡಿಕೊಡುವ ಸಮಯದಲ್ಲಿ 7ನೇ ಪ್ರತಿವಾದಿ ತನ್ನ ತಂದೆ ತಾಯಿಯ ಇತರ ಮಕ್ಕಳಿಗಿಂತ ಅನಾನುಕೂಲವಾಗಿದ್ದರು ಎಂದರೆ ಸರಿ. 1ನೇ ಪ್ರತಿವಾದಿ ಬಿ.ಇ ಪಧವಿಧರರಾಗಿದ್ದರು. ಮದುವೆಯ ಸಮಯದಲ್ಲಿ 1ನೇ ಪ್ರತಿವಾದಿಗೆ ಯಾವುದೇ ಉದ್ಯೋಗ ಇರಲಿಲ್ಲ ಎಂದರೆ ಸರಿ. ದಾವಾ ಐಟಂ ನಂ. 3 ನ್ನು 7ನೇ ಪ್ರತಿವಾದಿಯ ತಂದೆ ತಾಯಿಯ ಸಹಕಾರದಿಂದ 7ನೇ ಪ್ರತಿವಾದಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.3, 7ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ ನಂ.8 ಮತ್ತು 9 ನ್ನು, 1 ಮತ್ತು 7ನೇ ಪ್ರತಿವಾದಿಯರು ಜಂಟಿಯಾಗಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.8 ಮತ್ತು 9, 1 ಹಾಗೂ 7ನೇ ಪ್ರತಿವಾದಿಯರು ಸ್ವಂತ ಪರಿಶ್ರಮದಿಂದ ಸಂಪಾದಿಸಿದ ಆಸ್ತಿ ಎಂದರೆ ಸರಿಯಲ್ಲ.

(ಉಳಿದಂತೆ 1ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ಶ್ರೀ. ಎ.ಕೆ.ಎನ್ ವಕೀಲರು ನುಡಿಯುತ್ತಾರೆ)

**ಪಾಟೀ ಸವಾಲುಃ** 8, 9 **ಮತ್ತು** 12**ನೇ ಪ್ರತಿವಾದಿಯರ ಪರಃಶ್ರೀ**. KSSR **ವಕೀಲರಿಂದ**:

ಪೇಟಯ್ಯರವರಿಗೆ ಇಬ್ಬರು ಹೆಣ್ಣು, 4 ಗಂಡು ಮಕ್ಕಳು. 4ನೇಯವರು ನನ್ನ ಗಂಡ ಎಂದರೆ ಸರಿ. 2ನೇ ಪ್ರತಿವಾದಿ ಮದುವೆಯಾಗದೇ ತೀರಿಕೊಂಡಿದ್ದಾರೆ ಎಂದರೆ ಸರಿ. ಅವರು

ಬದುಕಿದ್ದಾಗೆ ಮಂಡ್ಯದಲ್ಲಿ ಕಸ್ತೂರ್ ಬಾ ನರ್ಸಿಂಗ್ ಹೋಮ್ ನಡೆಸುತ್ತಿದ್ದರು. ಅದಕ್ಕೆ ಮಂಡ್ಯದಲ್ಲಿ ಒಳ್ಳೆಯ ಹೆಸರಿತ್ತು ಎಂದರೆ ಸರಿ.

ಪೇಟಯ್ಯರವರಿಗೆ ದಾವಾ ಐಟಂ ನಂ.5ನ್ನು ಹೊರತುಪಡಿಸಿ ಬೇರೆ ಸ್ವತ್ತುಗಳು ಇರಲಿಲ್ಲ ಎಂದರೆ ನನಗೆ ಸಂಪೂರ್ಣವಾಗಿ ಗೊತ್ತಿಲ್ಲ. ದಾವಾ ಐಟಂನ.5 ನ್ನು ಹೊಂಬಾಳಮ್ಮರವರ ಹೆಸರಿನಲ್ಲಿ ಖರೀದಿಸಲು ಯಾರು ಹಣ ಕೊಟ್ಟಿದ್ದಾರೆ ಎಂದು ತಿಳಿದುಕೊಂಡಿದ್ದಿರಾ ಎಂದರೆ ಪೇಟಯ್ಯರವರು ಹಣ ಕೊಟ್ಟಿದ್ದಾರೆ. ಆದ್ದರಿಂದ ದಾವಾ ಐಟಂ ನಂ.5 ಪೇಟಯ್ಯ ಹಾಗೂ ಹೊಂಬಾಳಮ್ಮ ಇಬ್ಬರಿಗೂ ಸೇರಿದ ಸ್ವತ್ತು ಎಂದರೆ ಇರಬಹುದು.

ನನ್ನ ಮದುವೆ ಮಹೇಂದ್ರ ಬುದನೂರು ರವರೊಂದಿಗೆ 1979 ರಲ್ಲಿ ನಡೆಯಿತು. ಆಗ ನನ್ನ ಗಂಡ ಅಮೇರಿಕಾದಲ್ಲಿ ವಾಸವಿದ್ದರು. ದಾವಾ ಐಟಂ ನಂ.5 ನ್ನು 1ನೇ ಪ್ರತಿವಾದಿ ನಿರುದ್ಯೋಗಿಯಾಗಿದ್ದ ಕಾರಣ ಹಕ್ಕು ಖುಲಾಸೆ ಪತ್ರ ಬರೆದುಕೊಡಲಾಗಿತ್ತು ಎಂದರೆ ಅವರು ಸಾಲ ತೆಗೆದುಕೊಳ್ಳಲು ಅನುಕೂಲವಾಗುವಂತೆ ಬರೆದುಕೊಡಲಾಗಿತ್ತು. ನಿಪಿ-11 ರಲ್ಲಿ ಎಲ್ಲಿಯಾದರೂ ಸಾಲ ತೆಗೆದುಕೊಳ್ಳಲು ಅನುಕೂಲವಾಗಲೀ ಎಂಬ ಕಾರಣಕ್ಕಾಗಿ ಎಂದು ಬರೆಯಲಾಗಿದೆಯೇ ಎಂದರೆ ಆ ದಾಖಲೆಯನ್ನು ನನಗೆ ಓದಲು ಬರುವುದಿಲ್ಲ. ದಾವಾ ಐಟಂ ನಂ.5 ರ ಬಗ್ಗೆ ಮೇಲೆ ಹೇಳಿದ ವಿಷಯವನ್ನು ವಾದ ಪತ್ರದಲ್ಲಿ ಮತ್ತು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲಿ ಬರೆಸಿ ಹಾಕಿದ್ದಿರಾ ಎಂದರೆ ಇಲ್ಲ. ದಾವಾ ಐಟಂ ನಂ.5 ನ್ನು ಪೇಟಯ್ಯ ಮತ್ತು ಅವರ ಎಲ್ಲಾ ಮಕ್ಕಳು ತಮ್ಮ ಹಕ್ಕನ್ನು 1ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದರಿಂದ ಅದು 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನಿಪಿ-11 ಕ್ಕೆ ನನ್ನ ಗಂಡ ಕೂಡ ಸಹಿ ಮಾಡಿದ್ದಾರೆ ಎಂದರೆ ಸರಿ. ನಿಪಿ-11 ರ ಆಧಾರದ ಮೇಲೆ ಅದರ ಖಾತೆ 1ನೇ ಪ್ರತಿವಾದಿಯ ಹೆಸರಿಗೆ ಬದಲಾಗಿ ಅವರೇ ಕಂದಾಯ ವಗೈರೆ ಕಟ್ಟುತ್ತಾ ಬರುತ್ತಿದ್ದರು ಎಂದರೆ ನಾವು ಹಣ ಕಳುಹಿಸುತ್ತಿದ್ದೇವು. ಹಣ ಕಳುಹಿಸುತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಇರುವ ದಾಖಲೆ ಕೊಟ್ಟಿದ್ದೇನೆ. 1ನೇ ಪ್ರತಿವಾದಿ ತಮ್ಮ ದರದ್ದು ನಿಮಿತ್ತವಾಗಿ ದಾವಾ ಐಟಂ ನಂ.5 ನ್ನು 2011 ರಲ್ಲಿ 8 ಮತ್ತು 9ನೇ ಪ್ರತಿವಾದಿಯರಿಗೆ ಕ್ರಯಕ್ಕೆ ಕೊಟ್ಟು ಸ್ವಾಧೀನಾನುಭವ ಬಿಟ್ಟು ಕೊಟ್ಟಿದ್ದಾರೆ ಎಂದರೆ ನಮಗೆ ಹೇಳದೇ ಮಾಡಿದ್ದಾರೆ. ದಾವಾ ಐಟಂ ನಂ.5 ರಲ್ಲಿ ಈಗ 8 ಮತ್ತು 9ನೇ ಪ್ರತಿವಾದಿಯರು ತಾರಾ Diagnostic center and Poly clinic ನಡೆಸುತ್ತಿದ್ದಾರೆ ಎಂದರೆ ಸರಿ. ದಾವಾ ಐಟಂ ನಂ.5 ರಲ್ಲಿ ನನಗಾಗಲೀ ನನ್ನ ವಾರಸುದಾರರಿಗಾಗಲೀ ಯಾವುದೇ ಹಕ್ಕು ಸ್ವಾಧೀನಾನುಭವ, ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.2 1ನೇ ಪ್ರತಿವಾದಿಗೆ ಯಾವ ರೀತಿ ಬಂತು ಎಂದು ನಾನು ತಿಳಿದುಕೊಂಡಿದ್ದೇನೆ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ದಾವಾ ಐಟಂ ನಂ. 2 1ನೇ ಪ್ರತಿವಾದಿಗೆ ಹೇಗೆ ಬಂತು ಎಂದು ಬರೆಸಿದ್ದಿರಾ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ. 2 ಯಾವಾ ಗ್ರಾಮ ಮತ್ತು ಹೋಬಳಿಯಲ್ಲಿ ಬರುತ್ತದೆ ಎಂದು ತಿಳಿದುಕೊಂಡಿದ್ದೇನೆ. ಆದರೆ ಈಗ ನೆನಪಾಗುತ್ತಿಲ್ಲ. ದಾವಾ ಐಟಂ ನಂ. 2ರ ವಿಸ್ತೀರ್ಣ ಗೊತ್ತು. ದಾವಾ ಐಟಂ ನಂ. 2 1ನೇ ಪ್ರತಿವಾದಿಯ ಹೆಸರಿನಲ್ಲಿದೆ. ಅದರಲ್ಲಿ 24 ಗುಂಟೆ ಇದೆ. ಅದನ್ನು 1ನೇ ಪ್ರತಿವಾದಿ ಯಾರಿಂದ ಖರೀದಿಸಿದರು ಎಂದು ನಾನು ತಿಳಿದುಕೊಂಡಿಲ್ಲ. ಒಟ್ಟು 2 ಎಕರೆ 24 ಗುಂಟೆ ಖರೀದಿಸಿದ್ದರು. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಎ ಶ್ರೇಣಿಯ ಗುತ್ತಿಗೆದಾರರಾಗಿದ್ದ ಕಾರಣ ಅವರಿಗೆ ಹಣದ ಅವಶ್ಯಕತೆ ಇದ್ದುದರಿಂದ ದಾವಾ ಐಟಂ ನಂ.2ನ್ನು 2000ನೇ ಇಸಲಿಯಲ್ಲಿ 12ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2ರ ಚೆಕ್ಕುಬಂದಿ ಗೊತ್ತಿದೆಯೇ ಎಂದರೆ ಈಗ ನೆನಪಾಗುತ್ತಿಲ್ಲ. ದಾವೆಯಲ್ಲಿ ಕೊಟ್ಟಿರುವ ಚೆಕ್ಕುಬಂದಿ ನಾನು ಊಹೆ ಮಾಡಿಕೊಂಡು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ. 5 ಮತ್ತು 2 ನ್ನು 1ನೇ ಪ್ರತಿವಾದಿ ತಮ್ಮ ದರದ್ದು ನಿಮಿತ್ತವಾಗಿ ಪ್ರತಿವಾದಿ ಸಂಃ 8,9 ಮತ್ತು 12 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ವಿಷಯ ಈ ದಾವೆ ಸಲ್ಲಿಸುವಾಗ ನನಗೆ ಗೊತ್ತಾಯಿತು. ದಾವೆ ಸಲ್ಲಿಸುವ ಕಾಲಕ್ಕೆ 8, 9 ಮತ್ತು 12ನೇ ಪ್ರತಿವಾದಿಯರನ್ನು ಪಕ್ಷಗಾರರನ್ನಾಗಿ ಮಾಡದೇ 5 ವರ್ಷಗಳ ನಂತರ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಜೀವಿತಾವಧಿಯಲ್ಲಿ 1ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಮಕ್ಕಳು, 2ನೇ ಪ್ರತಿವಾದಿಯ ಜೊತೆಯಲ್ಲಿ ಇದ್ದರು ಎಂದರೆ ಸರಿ. 1ನೇ ಪ್ರತಿವಾದಿಯ ಹೆಂಡತಿ ಮಕ್ಕಳು ರವರ ಖರ್ಚು ವೆಚ್ಚಗಳಿಗೆ ಮತ್ತು ವ್ಯವಹಾರಕ್ಕೆ 2ನೇ ಪ್ರತಿವಾದಿ ಧನ ಸಹಾಯ ಮಾಡುತ್ತಿದ್ದರು ಎಂದರೆ ನರ್ಸಿಂಗ್ ಹೋಮ್ ಗೆ ನಾವು ಹಣ ಕಳುಹಿಸಿದ್ದೇವೆ. ಆ ರೀತಿ ಹಣ ಕಳುಹಿಸಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದಿರಾ ಎಂದರೆ ಇಲ್ಲ. ನನ್ನ ಗಂಡ ತಮ್ಮ ಅಂತಿಮ ದಿನಗಳನ್ನು ನರ್ಸಿಂಗ್ ಹೋಮ್ ನಲ್ಲಿ ಕಳೆದರು. ಸಾಕ್ಷಿ ಮುಂದುವರಿದ ಅವರ ಕೊನೆಯ ದಿನಗಳನ್ನು ಅಮೇರಿಕಾದಲ್ಲಿ ಕಳೆದರು ಎಂದು ನುಡಿಯುತ್ತಾರೆ. ನನ್ನ ಗಂಡ ಅಮೇರಿಕಾದಲ್ಲಿ ಮೃತಪಟ್ಟರು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ.